ಕರ್ನಾಟಕ ಸರ್ಕಾರ

ಆಯುಕ್ತರ ಕಚೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಕೇಂದ್ರೀಕೃತ ದಾಖಲಾತಿ ಘಟಕ,
ಸೆಂಟ್ರಲ್ ಜೂನಿಯರ್ ಕಾಲೇಜು ಆವರಣ, ಕೆಂಪೇಗೌಡ ರಸ್ತೆ, ಬೆಂಗಳೂರು-560002

ದಿನಾಂಕ: 29-09-2020

**ದಿನಾಂಕ:28-09-2020 ರಂದು ಈ ಕಛೇರಿಯಿಂದ ನೀಡಲಾದ ಪ್ರಕಟಣೆಗೆ ಸ್ಪಷ್ಟೀಕರಣ**

ಈ ಕೆಳಕಂಡ ಕಾರಣಗಳಿಂದ ಕೆಲವು ಅಭ್ಯರ್ಥಿಗಳು ಪರೀಕ್ಷಾ ಕೇಂದ್ರಗಳ ಬದಲಾವಣೆ ಕೋರಿ ಮನವಿಯನ್ನು ಸಲ್ಲಿಸಿರುತ್ತಾರೆ. ಈ ಕೆಳಗೆ ನಮೂದಿಸಿರುವ ಕಾರಣಗಳಿಗೆ ಮಾತ್ರವೇ ಸೀಮಿತಗೊಳಿಸಿ ಕೇಂದ್ರಗಳ ಬದಲಾವಣೆಗೆ ಅವಕಾಶ ಮಾಡಿಕೊಡಲಾಗಿದೆ.

- ಕೋವಿಡ್-19 ಕಾರಣದಿಂದಾಗಿ ತಮ್ಮ ಮೂಲ ಜಿಲ್ಲೆಗಳಿಗೆ ಹಿಂತಿರುಗಿರುವ ವಲಸಿಗರು:-
  (ಪರೀಕ್ಷಾ ಕೇಂದ್ರ ಮತ್ತು ಪ್ರಸ್ತುತ ವಾಸಸ್ಥಳದ/ ಸ್ವಗ್ರಾಮದ ಅಂತರ 200ಕಿಮೀ ಗಿಂತ ಹೆಚ್ಚು ಇದ್ದಲ್ಲಿ ಮಾತ್ರ ಮನವಿಯನ್ನು ಪರಿಗಣಿಸಲಾಗುವುದು.)
- ಕೆಲವು ಗರ್ಭಿಣಿ ಸ್ತ್ರೀಯರು:-
  (ಪರೀಕ್ಷಾ ಕೇಂದ್ರ ಮತ್ತು ಪ್ರಸ್ತುತ ವಾಸಸ್ಥಳದ/ ಸ್ವಗ್ರಾಮದ ಅಂತರ 200ಕಿಮೀ ಗಿಂತ ಕಡಿಮೆ ಇದ್ದರೂ ಸಹ ಪರಿಗಣಿಸಲಾಗುವುದು ಆದರೆ ವೈದ್ಯಕೀಯ ಪ್ರಮಾಣ ಪತ್ರವನ್ನು ಲಗತ್ತಿಸಿರಬೇಕು ಇಲ್ಲವಾದಲ್ಲಿ ಪರಿಗಣಿಸಲಾಗುವುದಿಲ್ಲ)
- ಪ್ರವಾಹ ಪೀಡಿತರು:-
  ಪರೀಕ್ಷಾ ಕೇಂದ್ರ ಮತ್ತು ಪ್ರಸ್ತುತ ವಾಸಸ್ಥಳದ/ ಸ್ವಗ್ರಾಮದ ಅಂತರ 200ಕಿಮೀ ಗಿಂತ ಹೆಚ್ಚಾಗಿರಬೇಕು ಮತ್ತು ಪ್ರವಾಹ ಪೀಡಿತರಾಗಿರುವ ಬಗ್ಗೆ ಸಂಬಂದಿಸಿದ ಪ್ರಾಧಿಕಾರದಿಂದ ನೀಡಿರುವ ಧೃಢೀಕರಣ ಪತ್ರ ಸಲ್ಲಿಸಬೇಕು.

ಮೇಲ್ಕಂಡ ಕಾರಣಗಳಿಗಾಗಿ ಪರೀಕ್ಷಾ ಕೇಂದ್ರ ಬದಲಾವಣೆ ಕೋರುವ ಅಭ್ಯರ್ಥಿಗಳು ದಿನಾಂಕ:02-10-2020ರ ತಡರಾತ್ರಿ 12.00 ಗಂಟೆಯವರೆಗೆ ಮಾತ್ರವೇ ತಮ್ಮ ಮನವಿಯನ್ನು ಈ ಕಛೇರಿಯ E-MAIL ವಿಳಾಸ cackarnataka@gmail.comಗೆ ಈ ಕೆಳಕಂಡ ದಾಖಲೆಗಳೊಂದಿಗೆ ಸಲ್ಲಿಸಲು ತಿಳಿಸಿದೆ. ನಂತರ ಬರುವ ಮನವಿಗಳನ್ನು ಪರಿಗಣಿಸುವುದಿಲ್ಲ.

| | | |
|---|---|---|
| 1 | ಅರ್ಜಿ ಸಂಖ್ಯೆ | ಮನವಿ ಪತ್ರದಲ್ಲಿ ಕಡ್ಡಾಯವಾಗಿ ನಮೂದಿಸಬೇಕು |
| 2 | ಅಭ್ಯರ್ಥಿಯ ಹೆಸರು | |
| 3 | ತಂದೆಯ ಹೆಸರು | |
| 4 | ಜನ್ಮ ದಿನಾಂಕ | |
| 5 | ವಾಸ ಸ್ಥಳ ಧೃಢೀಕರಣ ಪತ್ರ / ಆಧಾರ್ ಕಾರ್ಡ್ / ಚುನಾವಣಾ ಗುರುತಿನ ಚೀಟಿ | (ಯಾವುದಾದರೂ ಒಂದು ದಾಖಲೆಯನ್ನು ಮಾತ್ರ Scan ಮಾಡಿ ಅರ್ಜಿಯೊಂದಿಗೆ Upload ಮಾಡಿರಬೇಕು) |

**ಷರತ್ತುಗಳು:-**

1. ಮನವಿಯಲ್ಲಿ ಅಭ್ಯರ್ಥಿಯ ಸಹಿ ಕಡ್ಡಾಯವಾಗಿರಬೇಕು. ಅಭ್ಯರ್ಥಿಯ ಸಹಿಯನ್ನು ಈ ಕಛೇರಿಯಲ್ಲಿ ಲಭ್ಯವಿರುವ ದಾಖಲೆಗಳೊಂದಿಗೆ ಪರಿಶೀಲಿಸಿ ನೈಜವಾದ ಮನವಿಗಳನ್ನು ಮಾತ್ರ ಪರಿಗಣಿಸಲಾಗುವುದು.
2. ಅಧಿಕೃತವಲ್ಲದ ಮನವಿಗಳನ್ನು ಪರಿಗಣಿಸುವುದಿಲ್ಲ. ಮನವಿ ಅಧಿಕೃತವಾಗಿದ್ದಲ್ಲಿ ಮಾತ್ರ ದಿನಾಂಕ: 03-10-2020ರ ಮಧ್ಯಾಹ್ನ 12 ಗಂಟೆಯ ಒಳಗಾಗಿ ಪರೀಕ್ಷಾ ಕೇಂದ್ರ ಬದಲಾವಣೆ ಆಗಿರುವ ಬಗ್ಗೆ ಪರಿಷ್ಕೃತ ಪ್ರವೇಶ ಪತ್ರವನ್ನು ಇಲಾಖಾ ವೆಬ್‌ಸೈಟ್‌ನಲ್ಲಿ Upload ಮಾಡಲಾಗುವುದು. ಈ ಅವಧಿಯ ಒಳಗಾಗಿ ತಮ್ಮ ಪ್ರವೇಶ ಪತ್ರದಲ್ಲಿ ಯಾವುದೇ ಬದಲಾವಣೆ ಆಗಿಲ್ಲದೇ ಇದ್ದಲ್ಲಿ ತಮ್ಮ ಮನವಿಯನ್ನು ಪರಿಗಣಿಸಿರುವುದಿಲ್ಲವೆಂದು ಭಾವಿಸಲು ತಿಳಿಸಿದೆ.
3. ಮೇಲ್ಕಂಡ ಷರತ್ತುಗಳಿಗೆ ಒಳಪಟ್ಟ ಅಭ್ಯರ್ಥಿಗಳ ಮನವಿಯನ್ನು ಮಾತ್ರ ಪರಿಗಣಿಸಲಾಗುವುದು. ಅನ್ಯತಾ ದೂರವಾಣಿ ಕರೆಗಳನ್ನು ಮಾಡಿ ಕಛೇರಿಯ ಕಾರ್ಯ ನಿರ್ವಹಣೆಗೆ ತೊಂದರೆ ಉಂಟು ಮಾಡಬಾರದು ಎಂದು ತಿಳಿಸಿದೆ. ದೂರವಾಣಿ ಮೂಲಕ ಯಾವುದೇ ಸಮಸ್ಯೆಗಳನ್ನು ಪರಿಹರಿಸಲಾಗುವುದಿಲ್ಲ. ಮತ್ತು ತಾವು ಸಲ್ಲಿಸುವ E-mail ಮನವಿಗಳಲ್ಲಿ ಮೇಲ್ಕಂಡ ಮಾಹಿತಿ/ದಾಖಲೆಗಳು ಲಭ್ಯವಿಲ್ಲದಿದ್ದಲ್ಲಿ ಅಥವಾ ತಾವು ಸಲ್ಲಿಸುವ ದಾಖಲೆಗಳು ಮೇಲ್ಕಂಡ ಷರತ್ತುಗಳಿಗೆ ಅನುಸಾರ ಇಲ್ಲವಾದಲ್ಲಿ ತಮ್ಮ ಮನವಿಯನ್ನು ತಿರಸ್ಕರಿಸಲಾಗಿದೆ ಎಂದು ಪರಿಭಾವಿಸುವುದು, ತಮ್ಮ ಮನವಿಗೆ ಪತ್ಯುತ್ತರವನ್ನು ಈ ಕಛೇರಿಯಿಂದ ಲಿಖಿತ ಮೂಲಕವಾಗಲಿ, E-mail ಸಂದೇಶದ ಮೂಲಕವಾಗಲಿ ನೀಡಲಾಗುವುದಿಲ್ಲ.

29/9/2020

ವಿಶೇಷಾಧಿಕಾರಿ
ಕೇಂದ್ರೀಕೃತ ದಾಖಲಾತಿ ಘಟಕ